ಮೇ: ಹೆಚ್ಚುವರಿ ದಿವಾಣಿ ನ್ಯಾಯಾಧೀಶರು ಹಾಗೂ ಜೆಎಂಎಫ್‌ಸಿ ನ್ಯಾಯಾಲಯ, ಮುಧೋಳ

ಸಿ.ಸಿ. ನಂ. 80/2022

ಚಾಸಾ.2 ಫ್ರಾಸಾ.2

| | |
|---|---|
| ಹೆಸರು | ಮಲ್ಲಯ್ಯ ಶಿವಪ್ಪಯ್ಯನಮಠ |
| ಗಂಡನ/ತಂದೆಯ ಹೆಸರು | ಈರಯ್ಯ |
| ವಯಸ್ಸು | 28 ವರ್ಷ |
| ಉದ್ಯೋಗ | ಒಕ್ಕಲುತನ |
| ವಾಸಸ್ಥಳ | ಮುದ್ದಾಪೂರ |

**ದಿನಾಂಕಃ 06.02.2024 ರಂದು ಸಾಕ್ಷಿಯನ್ನು ಕರೆದು ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ : ಶ್ರೀ. ಎ.ಪಿ.ಪಿ., ರವರಿಂದ :**

ದಿ: 21.12.2021 ರಂದು ಪೋಲಿಸರು ನನಗೆ ಕರೆದು ಬೆಳಿಗ್ಗೆ 8 ರಿಂದ 9 ಗಂಟೆಯ ವರೆಗೆ ಪೋಲಿಸರು ಪಂಚನಾಮೆಯನ್ನು ಚಾಸಾ 1 ರ ಜಮೀನಿನಲ್ಲಿ ಮಾಡಿದರು. ಆ ಕಾಲಕ್ಕೆ ನಾನು ಚಾಸಾ 1 ಮತ್ತು 3 ಇದ್ದೇವು. ಸಾಕ್ಷಿಗೆ ಈಗಾಗಲೇ ಗುರುತಿಸಲ್ಪಟ್ಟಿರುವ ನಿಪಿ 2 ನ್ನು ತೋರಿಸಲಾಗಿ ಸಾಕ್ಷಿ ಅದರಲ್ಲಿರುವ ತನ್ನ ಸಹಿ ನೋಡಿ ಗುರುತಿಸಿದ್ದು, ಅದನ್ನು ನಿಪಿ 2 ಬಿ ಎಂದು ಗುರುತಿಸಲಾಯಿತು. ಸಾಕ್ಷಿ ನಿಪಿ 3 ಮತ್ತು 4 ನ್ನು ನೋಡಿ ಗುರುತಿಸಿರುತ್ತಾರೆ. ನಿಪಿ 2 ರ ಕಾಲಕ್ಕೆ ತೆಗೆದ ಹಾತ ನಕಾಶೆ ನೋಡಿ ಸಾಕ್ಷಿ ಗುರುತಿಸಿದ್ದು, ನಿಪಿ 5 ಎಂದು ಗುರುತಿಸಲಾಯಿತು. ಅದರಲ್ಲಿನ ಸಾಕ್ಷಿ ಸಹಿಯನ್ನು ನಿಪಿ 5 ಎ ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಆರೋಪಿ ನಂ.2 ರ ಪರ ವಕೀಲರಿಂದಃ**

ಈ ಪ್ರಕರಣದಲ್ಲಿ ಪಂಚರಾಗಿ ಸಹಕರಿಸುವಂತೆ ಪೋಲಿಸರು ನನಗೆ ನೋಟಿಸ ನೀಡಿದ್ದರು. ಪ್ರಕರಣದ ಮಾಹಿತಿ ನನಗೆ ಪೋಲಿಸರೆ ನೀಡಿದ್ದಾರೆ ಎಂದರೆ ಸರಿ ಅಲ್ಲ. ಮುಂದುವರೆದು ಸಾಕ್ಷಿ ಪಂಚರಾಗಲು ನನಗೆ ಪೋಲಿಸರು ತಿಳಿಸಿಲ್ಲ ಎಂದು ನುಡಿಯುತ್ತಾರೆ. ನಿಪಿ 2 ಮ್ತು 3 ನ್ನು ಪೋಲಿಸರು ಹೇಳಿದ್ದರಿಂದ ನಿಂತು ತೆಗೆಸಿಕೊಂಡಿರುತ್ತೇನೆ. ಪ್ರಕರಣದ ಬಗ್ಗೆ ನನಗೆ ಪೋಲಿಸರು ಹೇಳಿದ್ದರಿಂದ ತಿಳಿದಿರುತ್ತದೆ. ಪ್ರಕರಣದಲ್ಲಿ ಯಾವ ವಸ್ತು ಕಳ್ಳತನವಾಗಿದೆ ಎಂದು ನನಗೆ ಗೊತ್ತಿಲ್ಲ ಎಂದರೆ ಸಾಕ್ಷಿ ಕೇಬಲ ಕಳ್ಳತನವಾಗಿತ್ತು ಎಂದು ನುಡಿಯುತ್ತಾರೆ. ಈ ವಿಷಯ ಸುಳ್ಳು ಹೇಳುತ್ತಿದ್ದೇನೆಂದರೆ ಸರಿ ಅಲ್ಲ. ಚಾಸಾ 1 ಪರಿಚಯವಿದೆ. ಅವರು ನನಗೆ ಪರಿಚಯವೆಂಬ ಕಾರಣಕ್ಕೆ ಅವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆಂದರೆ ಸರಿ ಅಲ್ಲ.

**ಮರು ವಿಚಾರಣೆ ಇಲ್ಲ .**

ಸಿ.ಸಿ. ನಂ. 80/2022

ಚಾಸಾ.2 ಪ್ರಾಸಾ.2

ಆರೋಪಿ ನಂ.1 ರ ಪರ ವಕೀಲರು ಗೈರು ಹಾಜರು ಇದ್ದ ಕಾರಣ ಅವರ ಪರ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ.

Sd/

ಹೆಚ್ಚುವರಿ ಜೆಎಂಎಫ್‌ಸಿ ಮುಧೋಳ.

ಸಾಕ್ಷಿಯ ಸಹಿ